**ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ ಪೊನ್ನಂಪೇಟೆ.**

**ಸಿ.ಸಿ.ಸಂಖ್ಯೆ.1203/2025**

ಫಿರ್ಯಾದುದಾರು: ಶ್ರೀ ಸತ್ಯಪ್ರಸಾದ್ ಸಿ.ಕೆ,
ತಂದೆಃ ಕಾಳಯ್ಯ ಸಿ.ಎಮ್,
ಪ್ರಾಯಃ 40 ವರ್ಷ,
ವಾಸಃ ಟಿ.ಶೆಟ್ಟಿಗೇರಿ ಗ್ರಾಮ,
ಪೊನ್ನಂಪೇಟೆ ತಾಲ್ಲೂಕು,
ಕೊಡಗು.

---ವಿರುದ್ದ –

ಆರೋಪಿ : ಶ್ರೀ ಟಿ.ಎಮ್.ರಾಜು,
ತಂದೆಃ ಪೌತಿ ಮಾರಿಮುತ್ತು,
ಪ್ರಾಯಃ 46 ವರ್ಷ,
ವಾಸಃ ಕಾನೂರು ಗ್ರಾಮ ಮತ್ತು ಅಂಚೆ,
ಪೊನ್ನಂಪೇಟೆ ತಾಲ್ಲೂಕು, ಕೊಡಗು.

**ಆರೋಪಿಯಾದ ನಿಮ್ಮ ವಿರುದ್ದ ಇರುವ ಆಪಾದನೆ ಏನೆಂದರೆ**

ಆರೋಪಿಯಾದ ನೀವು ಕಂಟ್ರ್ಯಾಕ್ಟರ್ ಕೆಲಸ ಮಾಡಿಕೊಂಡಿದ್ದು, ಪಿರ್ಯಾದಿದಾರರಾದ ಶ್ರೀ ಸತ್ಯಪ್ರಸ್ರಾದ್ ಸಿ.ಕೆ, ರವರಿಗೆ ಪರಿಚಯರಸ್ಥರಾಗಿದ್ದು, ಆರೋಪಿಯಾದ ನೀವು ಪಿರ್ಯಾದುದಾರರ ಹೊಸ ಮನೆ ನಿರ್ಮಾಣಕ್ಕಾಗಿ ದಿನಾಂಕ 11.05.2023 ರಂದು ಪಿರ್ಯಾದುದಾರರ ಜೊತೆ ಒಪ್ಪಂದ ಮಾಡಿಕೊಂಡು ಒಟ್ಟು ರೂ.30,00,000/- ಹಣವನ್ನು ಮುಂಗಡವಾಗಿ ಪಡೆದುಕೊಂಡಿದ್ದು, ಮನೆ ನಿರ್ಮಾಣ ಕಾರ್ಯವನು ಪೂರ್ಣಗೊಳಿಸದೆ ಮನೆ ನಿರ್ಮಾಣ ಕಾರ್ಯವನ್ನು ಮಧ್ಯದಲ್ಲಿ ಕೈಬಿಟ್ಟಿದ್ದು, ಉಳಿದ ರೂ.5,75,000/- ಹಣವನ್ನು ಪಿರ್ಯಾದುದಾರರಿಗೆ ಕೊಡಬೇಕಾಗಿರುತ್ತದೆ. ನಂತರ ಪಿರ್ಯಾದಿದಾರರು ಉಳಿದ ಹಣವನ್ನು ಮರುಪಾವತಿಸುಂತೆ ಕೇಳಿದಾಗ ಆರೋಪಿಯಾದ ನೀವು ನಿಮ್ಮ ಕೆನರ ಕೆ.ಡಿ.ಸಿ.ಸಿ ಬ್ಯಾಂಕ್, ಪೊನ್ನಂಪೇಟೆ ಶಾಖೆಯ 039854 ನಂಬರಿನ ಚೆಕ್ಕನ್ನು ಉಳಿದ ಹಣದ ಬಾದ್ಯತೆಗಾಗಿ ನೀಡಿದ್ದು, ನಂತರ ಪಿರ್ಯಾದಿದಾರರು ಸದರಿ ಚೆಕ್ ಅನ್ನು ನಗದೀಕರಣಕ್ಕಾಗಿ ದಿಃ02.11.2024 ರಂದು ತಮ್ಮ ಬ್ಯಾಂಕ್ ಶಾಖೆಗೆ ಹಾಜರುಪಡಿಸಿದಾಗ ಸದರಿ ಬ್ಯಾಂಕ್‌ನವರು ದಿಃ19.12.2024ರಂದು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಹಿಂಬರಹ ನೀಡಿರುತ್ತಾರೆ. ನಂತರ

ಪಿರ್ಯಾದಿದಾರರು ತಮ್ಮ ವಕೀಲರ ಮೂಖಾಂತರ **15** ದಿನಗಳೊಳಗೆ ಚೆಕ್ ಹಣವನ್ನು ಹಿಂದಿರುಗಿಸುವಂತೆ ದಿಃ **02.01.2025** ರಂದು ಕಾನೂನು ರೀತಿಯ ನೋಟಿಸನ್ನು ನೀಡಿದ್ದರು ಸಹ ನೀವು ಚೆಕ್ ಮೊತ್ತವನ್ನು ನಿಗದಿತ ಸಮಯದಲ್ಲಿ ಪಿರ್ಯಾದಿದಾರರಿಗೆ ಕೊಡದೇ ಮೋಸ ಮಾಡಿದ್ದು, ಇದು ವ್ಯವಹರಣೆಯ ಲಿಖಿತಗಳ ಅಧಿನಿಯಮ ಕಲಂ **138** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿದ್ದು, ಈ ನ್ಯಾಯಾಲಯದ ವಿಚಾರಣಾಧಿಕಾರ ವ್ಯಾಪ್ತಿಯಲ್ಲಿ ಮಾಡಿರುವುದಾಗಿ ಆರೋಪಿಸಲಾಗಿದೆ.

**ಆರೋಪಿಯ ಹೇಳಿಕೆ**

1. ಪ್ರಶ್ನೆ - ಇದೀಗ ಓದಿ ಹೇಳಿದ ಆರೋಪಣೆಯು ನಿಮಗೆ ಅರ್ಥವಾಯಿತೆ ?

ಉತ್ತರಃ ಅರ್ಥವಾಯಿತು.

2. ಪ್ರಶ್ನೆ - ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಬಯಸುವಿರಾ?

ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆಯಗಬೇಕು.

(ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ದಿಃ07.01.2026 ರಂದು ಆರೋಪಿಗೆ ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ).

**Sd/-**
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಪೊನ್ನಂಪೇಟೆ,